ಸಿ.ಸಿ. ನಂ. 324 -2012 PW- 2.

ದಿನಾಂಕಃ 07-06-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. ಎಸ.ಕೆ.ಎಸ್ . ವಕೀಲರಿಂದಃ

1. ಬಾತ್ಮಿಯು ಚಾಸಾ 1 ರವರಿಗೆ ಬಂದಿರುತ್ತದೆ. ನಮ್ಗೆ ಮಾಹಿತಿಯನ್ನು ಸಂಜೆ 5-00 ಗಂಟೆಗೆ ನಾನು ಗಸ್ತಿನಲ್ಲಿರುವಾಗ ದೂರವಾಣಿಯ ಮೂಲಕ ತಿಳಿಸಿರುತ್ತಾರೆ. ನಮ್ಮ ಕಚೇರಿಯಿಂದ ಗಸ್ತಿನ ಜಾಗ ಸುಮಾರು ಒಂದೂವರೆ ಕಿಲೋ ಮೀಟರ ದೂರದಲ್ಲಿದೆ. ಗಸ್ತಿಗೆ ನಾನು ಒಬ್ಬನೇ ಹೋಗಿರುತ್ತೇನೆ. ಚಾಸಾ 3 ರಿಂದ 5 ರವರು ನನ್ನ ಜೊತೆಗೆ ಇರದೇ ಅವರ ಗಸ್ತಿನ ಜಾಗಗಳಲ್ಲಿ ಇದ್ದರು. ಚಾಸಾ 1 ಮತ್ತು ಇತರೇ ಸಿಬ್ಬಂದಿಯವರು ವಲಯ ಕಚೇರಿಯಲ್ಲಿ ಸೇರಿರುತ್ತೇವೆ. ಮಾಹಿತಿ ಬಂದ 15-20 ನಿಮಿಷದಲ್ಲಿ ಕಚೇರಿಗೆ ತಲುಪಿರುತ್ತೇನೆ. ಕಚೇರಿಯಲ್ಲಿ ಚಾಸ 1 ಹಾಗೂ ಕಚೇರಿ ಸಿಬ್ಬಂದಿಗಳು ಇದ್ದರು. ನಾನು ಹೋದಾಗ ಪಂಚ ಸಾಕ್ಷಿದಾರರು ಕಚೇರಿಯಲ್ಲಿ ಇರಲಿಲ್ಲ. ಪಂಚರು ಘಟನಾ ಸ್ಥಳಕ್ಕೆ ಹೋಗುವಾಗ ನಂದಿಗದ್ದೆಯ ಜನತಾ ಪ್ಲಾಟ ಬಳಿ ದಾರಿಯಲ್ಲಿ ಸಿಕ್ಕಿರುತ್ತಾರೆ. ಅವರನ್ನು ಚಾಸಾ 1 ರವರು ಕರೆದಿರುತ್ತಾರೆ.

2. ಘಟನಾ ಸ್ಥಳದಿಂದ ಸದ್ರಿ ಸ್ಥಳ ಸುಮಾರು 700- 800 ಮೀಟರ ದೂರದಲ್ಲಿ ಇದೆ. ಆರೋಪಿತರ ಹೆಸರುಗಳನ್ನು ತಿಳಿಸಿರುವುದಿಲ್ಲ. ಸ್ಥಳವನ್ನು ಮಾತ್ರ ತಿಳಿಸಿರುತ್ತಾರೆ ಆರೋಪಿ ಸಂಖ್ಯೆ 5 ರವರ ಮನೆಯ ಸಂಖ್ಯೆಯನ್ನು ನನಗೆ ಹೇಳಲು ಆಗುವುದಿಲ್ಲ. ಸದ್ರಿ ಮನೆಯ ಅಕ್ಕ ಪಕ್ಕದಲ್ಲಿ ಸುಮಾರು 30-40 ಮನೆಗಳು ಇವೆ. ನಾನು ಕಚೇರಿಯಿಂದ ಇಲಾಖಾ ಜೀಪ ನಿಂದ ಹೋಗಿರುತ್ತೇನೆ. ಸದ್ರಿ ವಾಹನವನ್ನು ಅಶೋಕ ಎಂಬುವವರು ಚಾಲನೆ ಮಾಡುತ್ತಿದ್ದರು. ನಾವು ನೇರವಾಗಿ ಆರೋಪಿ ಸಂಖ್ಯೆ 5 ರವರ ಮನೆಗೆ ಹೋಗಿರುತ್ತೇವೆ. ಸದ್ರಿ ಮನೆಯ ಅಕ್ಕ ಪಕ್ಕದಲ್ಲಿ ಯಾರ ಮನೆ ಇದೆ ಎಂದು ನಾನು ವಿಚಾರಣೆ

ಮಾಡಿಲ್ಲ. ಮನೆಯ ಸಂಖ್ಯೆಯನ್ನು ತಿಳಿದುಕೊಂಡಿಲ್ಲ. ಸದ್ರಿ ಮನೆಯ ಮಾಲೀಕರು ಯಾರು ಎಂದು ವಿಚಾರಣೆ ಮಾಡಿಲ್ಲ.

3. ಮನೆಯ ಒಳಗೆ ಎಷ್ಟು ಜನರು ಇದ್ದರು ಎಂದು ಹೇಳಲು ಅಗುವುದಿಲ್ಲ. ಮನೆಯ ಒಳಗೆ ಆರೋಪಿ ಸಂಖ್ಯೆ 5 ರವರು ಸ್ನಾನ ಮಾಡುತ್ತಿದ್ದಾರೆ ಎಂದು ಅವರ ಪತ್ನಿ ತಿಳಿಸಿದ್ದರಿಂದ ನಾವು ಹೊರಗೆ ಸುತ್ತುವರೆದು ಇದ್ದೇವು. ಯಾವ ಸಿಬ್ಬಂದಿ ಯಾವ ದಿಕ್ಕಿನಲ್ಲಿ ಸುತ್ತುವರೆದು ನಿಂತಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಸದ್ರಿ ಮನೆ ಯಾವ ದಿಕ್ಕಿಗೆ ಮುಖ ಮಾಡಿ ಇದೆ ಎಂದು ಹೇಳಲು ಆಗುವುದಿಲ್ಲ. ಆರೋಪಿ ಹಿಂದಿನ ಬಾಗಿಲಿನಿಂದ ಓಡಿ ಹೋಗಲು ಪ್ರಯತ್ನಿಸಿರುತ್ತಾನೆ. ನಮ್ಮ ಸಿಬ್ಬಂದಿ ಹಿಂದೆ ಹೋಗುತ್ತಿರುವಷ್ಟರಲ್ಲಿ ಆರೋಪಿ ಓಡಿ ಹೋಗಿರುತ್ತಾರೆ.

4. ಆರೋಪಿ ಹಿಡಿದು ಕೊಂಡು ಹೋಗುತ್ತಿದ್ದ 2 ಪಾತ್ರೆಗಳು ಅಲ್ಯೂಮಿನಿಯಂದ್ದಾಗಿರುತ್ತದೆ. ದೊಡ್ಡ ಪಾತ್ರೆ 10-15 ಕೆ.ಜಿ. ಹಾಗೂ ಸಣ್ಣ ಪಾತ್ರೆ ಸುಮಾರು 5 ಕೆ.ಜಿ. ಸಾಮರ್ಥ್ಯವನ್ನು ಹೊಂದಿರುತ್ತದೆ. 2 ಪಾತ್ರೆಗಳಲ್ಲಿ ಮಾಂಸ ಇತ್ತು. ಅವುಗಳಿಗೆ ಮುಚ್ಚಳ ಇರಲಿಲ್ಲ. ದೊಡ್ಡ ಪಾತ್ರೆಯಲ್ಲಿ ಸುಮಾರು 3 ಕೆ.ಜಿ. ಕುದಿಸಿದ ಮಾಂಸ ಹಾಗೂ ಸಣ್ಣ ಪಾತ್ರೆಯಲ್ಲಿ ಸುಮಾರು 3 ಕೆ.ಜಿ ಮಾಂಸ ಸಾಂಬಾರ ಇತ್ತು. ಅರೋಪಿಯು ಓಡಿ ಹೋಗುತ್ತಿರುವಾಗ ಮನೆಯಿಂದ 30-40 ಮೀಟರ ದೂರದಲ್ಲಿ ಸ್ವಲ್ಪ ಮಾಂಸ ಕೆಳಗೆ ಬಿದ್ದಿರುತ್ತದೆ. ಕೆಳಗೆ ಬಿದ್ದ ಮಾಂಸಕ್ಕೆ ಸ್ವಲ್ಪ ಮಣ್ಣು ತಾಗಿತ್ತು.

5. ವಶಪಡಿಸಿಕೊಂಡ ಪಾತ್ರೆಗಳ ಮೇಲೆ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿಲ್ಲ. ಆ ಸಮಯದಲ್ಲಿ ಪಂಚನಾಮೆ ಮಾಡಿರುತ್ತೇವೆ. ಸದ್ರಿ ಪಂಚನಾಮೆಗೆ ಇಬ್ಬರು ಪಂಚರು ಸಾಕ್ಷಿದಾರರು ಹಾಗೂ 3 ಜನ ಸಿಬ್ಬಂದಿಯವರು ಸಹಿ ಮಾಡಿರುತ್ತಾರೆ. ಆರೋಪಿ ಸುಮಾರು ದೂರ ಓಡಿ ಹೋಗಿದ್ದರಿಂದ ಹಿಡಿಯಲು ಪ್ರಯತ್ನ ಪಟ್ಟಿದ್ದರು ಸಹ ಸಿಕ್ಕಿರುವುದಿಲ್ಲ. ಯಾವ ದಿಕ್ಕಿನಲ್ಲಿ ಓಡಿ ಹೋಗಿರುತ್ತಾರೆಂದು ಗೊತ್ತಿಲ್ಲ.

ಆರೋಪಿಯನ್ನು ಹಿಡಿಯಲು ಚಾಸಾ 4 ಮತ್ತು ಅಂತೋನಿ ಎಂಬುವವರು ಪ್ರಯತ್ನಿಸಿರುತ್ತಾರೆ. ಸುಮಾರು ಅರ್ಧ ಕಿಲೋ ಮೀಟರವರೆಗೆ ಓಡಿರುತ್ತಾರೆ. ಮನೆಯ ಒಳಗೆ ಎಷ್ಟು ಕೋಣೆಗಳು ಇವೆ ಎಂದು ನನಗೆ ಗೊತ್ತಿಲ್ಲ. ಮಾಂಸವನ್ನು ಮನೆಯ ಒಳಗೆ ಕುದಿಸಿದ ಬಗ್ಗೆ ಕುರುಹುಗಳು ಕಂಡು ಬಂದಿಲ್ಲ. ಮನೆಯ ಒಳಗೆ ಬೇರೆ ಯಾವ ಮಾಂಸ ಕುದಿಸಿದ ಪಾತ್ರೆಗಳು ಕಂಡು ಬಂದಿರುವುದಿಲ್ಲ. ನಾವು ಅಲ್ಲಿ ಸುಮಾರು 15–20 ನಿಮಿಷ 5 ನೇ ಆರೋಪಿಯ ಮನೆಯಲ್ಲಿ ಇದ್ದೇವು.

6. 5 ನೇ ಆರೋಪಿಯ ಮನೆಯಿಂದ ಒಂದೂವರೆ ಕಿಲೋ ಮೀಟರ ದೂರದಲ್ಲಿರುವ 2 ನೇ ಆರೋಪಿಯ ಮನೆಗೆ ಹೋಗಿರುತ್ತೇವೆ. ಸದ್ರಿ ಮನೆಗೆ ಹೋಗುವ ರಸ್ತೆಯಲ್ಲಿ ಅನೇಕ ಮನೆಗಳು ಇವೆ. ವಿಷಯವನ್ನು 2 ನೇ ಆರೋಪಿಯ ತಂದೆ ವೇಜಿಮಿ ಗೊಮ್ಸುಗೆ ಚಾಸಾ 1 ರವರು ತಿಳಿಸಿರುತ್ತಾರೆ. 2 ನೇ ಆರೋಪಿಯ ಮನೆಯನ್ನು ಸಹ ಶೋಧನೆಮಾಡಿರುತ್ತೇವೆ. ಸದ್ರಿ ಮನೆಯ ಸಂಖ್ಯೆ ಮಾಲೀಕತ್ವದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಸದ್ರಿ ಮನೆಯಲ್ಲಿ 2 ಕೋಣೆಗಳು ಇವೆ. 2 ಕೋಣೆಗಳನ್ನು ಶೋಧನೆ ಮಾಡಿರುತ್ತೇವೆ. 2 ನೇ ಆರೋಪಿಯ ಮನೆಯನ್ನು ತಲುಪಿದಾಗ ಸಂಜೆ 7–00 ಗಂಟೆಯಾಗಿತ್ತು . ನಾವು ಹೋದಾಗ ಮನೆಯಲ್ಲಿ ವಿದ್ಯುತ್ ಸರಬರಾಜು ಇರಲಿಲ್ಲ. ನಾವು ಟಾರ್ಚ ಹಿಡಿದುಕೊಂಡು ಶೋಧನೆ ಮಾಡಿರುತ್ತೇವೆ. ಸದ್ರಿ ಮನೆಯಲ್ಲಿ ಸುಮಾರು 15 ನಿಮಿಷಗಳ ಕಾಲ ಇದ್ದೇವು. ಶೋಧನೆ ಮಾಡುವಾಗ ಯಾವದೋ ಒಬ್ಬ ವ್ಯಕ್ತಿ ಓಡಿ ಬಂದಿದ್ದು, ಯಾವ ದಿಕ್ಕಿನಿಂದ ಬಂದಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಅವರನ್ನು ನಾವೆಲ್ಲರೂ ಸೇರಿ ಹಿಡಿದಿರುತ್ತೇವೆ. ಅವರನ್ನು ಚಾಸಾ 1 ರವರು ವಿಚಾರಣೆ ಮಾಡಿರುತ್ತಾರೆ. ಸದ್ರಿ ವ್ಯಕ್ತಿ ಮಾಂಸವನು ಮುಚ್ಚಿಟ್ಟ ಸ್ಥಳವನ್ನು ತೋರಿಸಿವುದಾಗಿ ತಿಳಿಸಿದ್ದು, ಸದ್ರಿ ಸ್ಥಳ 2 ನೇ ಆರೋಪಿಯ ಮನೆಯಿಂದ ಸುಮಾರು 30–40 ಮೀಟರ ದೂರದಲ್ಲಿ ಇದೆ. 2 ನೇ ಆರೋಪಿಯ ಮನೆಯು ತೋಟದಲ್ಲಿತ್ತು. ಸದ್ರಿ ತೋಟವು 2 ನೇ ಆರೋಪಿಯ ತಂದೆಗೆ ಸೇರಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೋಡಿಲ್ಲ. ಹೊಂಡದಲ್ಲಿ ಸಿಕ್ಕ ಮಾಂಸ ಸ್ವಲ್ಪ ಚಲ್ಲಾ ಪಿಲ್ಲಿಯಾಗಿ ನೆಲಕ್ಕೆ ಬಿದ್ದು , ಸ್ವಲ್ಪ ಒಂದೂವರೆ ಕೆ.ಜಿ ಸಾಮರ್ಥ್ಯದ

ಮುಚ್ಚಿದ ಸ್ಟೀಲ ಡಬ್ಬಿಯಲ್ಲಿ ಇರುತ್ತದೆ . ಸದ್ರಿ ಮಾಂಸ ಸುಟ್ಟ ಮಾಂಸವಾಗಿರುತ್ತದೆ. ಸದ್ರಿ ಬಿದ್ದ ಮಾಂಸ 3 ಕೆ.ಜಿ ಇತ್ತು. ಡಬ್ಬಿಯಲ್ಲಿ ಸುಮಾರು 1 ಕೆ .ಜಿ ಇತ್ತು. ಮನೆಯ ಒಳಗೆ ಯಾವುದೇ ಮಾಂಸವನ್ನು ಸುಟ್ಟಿದ್ದ ಕುರುಹುಗಳು ಇರಲಿಲ್ಲ. ಮನೆಯ ಒಳಗೆ 2 ನೇ ಆರೋಪಿಯ ತಂದೆ ಹಾಗೂ 3 ನೇ ಆರೋಪಿ ಇದ್ದರು. 3 ನೇ ಆರೋಪಿಯನ್ನ ನಾನೇ ಹಿಡಿದುಕೊಂಡಿರುತ್ತೇನೆ. 3 ನೇ ಆರೋಪಿ ಮೊದಲನೇಯ ಕೋಣೆಯಲ್ಲಿ ಇದ್ದನು. 3 ನೇ ಆರೋಪಿಯ ಅಂಗ ಜಪ್ತಿಯನ್ನು ಮಾಡಿರುತ್ತೇವೆ. ಸದ್ರಿ ಸ್ಥಳದಲ್ಲಿಯು ಸಹ ಪಂಚರ ಹಾಗೂ ಸಿಬ್ಬಂದಿಯವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇವೆ. ಅಲ್ಲಿಲ ವಶಕ್ಕೆ ಪಡೆದುಕೊಂಡ ಡಬ್ಬಿಗಳ ಮೇಲೆ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುವುದಿಲ್ಲ. ಈ ಎಲ್ಲಾ ಪ್ರಕ್ರಿಯೇ ಮಾಡಲು 15– 20 ನಿಮಿಷ ತಾಗಿರುತ್ತದೆ.

7 . 2 ಮತ್ತು 3 ನೇ ಆರೋಪಿತರನ್ನು ಹಾಗೂ ಪಂಚರನ್ನು ವಲಯ ಕಚೇರಿಗೆ ರಾತ್ರಿ 8–00 ಗಂಟೆಗೆ ಕರೆದುಕೊಂಡು ಹೋಗಿರುತ್ತೇವೆ. ಜಪ್ತುಪಡಿಸಿಕೊಂಡ ವಸ್ತುಗಳನ್ನು ಚಾಸಾ 8 ರವರ ಹಸ್ತಕ್ಕೆ ನೀಡಿರುವುದಿಲ್ಲ. ನಾವು ಕಚೇರಿಯಲ್ಲಿ ಸುಮಾರು 10 – 15 ನಿಮಿಷಗಳ ಕಾಲ ಇದ್ದೇವು. ನಂತರ ಅಲ್ಲಿಂದ 7–8 ಕಿಲೋ ಮೀಟರ ದೂರದ ಹನೋಲಿಗೆ ಇಲಾಖಾ ವಾಹನದಲ್ಲಿ ಪಂಚರು, ಆರೋಪಿತರು ಹಾಗೂ ಸಿಬ್ಬಂದಿಯವರು ಒಟ್ಟು 6 ಜನರು ಹೋಗಿರುತ್ತೇವೆ. ವಾಹನವನ್ನು ಮುಖ್ಯ ರಸ್ತೆಯಲ್ಲಿ ನಿಲ್ಲಿಸಿರುತ್ತೇವೆ. 2 ನೇ ಆರೋಪಿಯ ಮನೆಯಿಂದ 6 ನೇ ಆರೋಪಿಯ ಮನೆ ಸುಮಾರು 1 ಕಿಲೋ ಮೀಟರ ಆಗುತ್ತದೆ. ಸದ್ರಿ ಮನೆಯ ಸಂಖ್ಯೆ ಮಾಲೀಕತ್ವವನ್ನು ಹೇಳಲು ಆಗುವುದಿಲ್ಲ. ಸದ್ರಿ ಮನೆಯನ್ನು ಶೋಧನೆ ಮಾಡಿರುತ್ತೇವೆ. ಸದ್ರಿ ಮನೆಯಲ್ಲಿ 3 ಕೋಣೆಗಳು ಇವೆ. ಮನೆಯಲ್ಲಿ ಒಟ್ಟು 3 ಜನರು ಇದ್ದರು. ಸದ್ರಿ ಮನೆಯ ಮುಂದಿನ ರಸ್ತೆಯ ಮೇಲೆ ಬಿಳಿ ಬಣ್ಣದ ಮಾರುತಿ 800 ವಾಹನ ನಿಂತಿರುತ್ತದೆ. ಸದ್ರಿ ಕಾರ ಯಾವ ಮಾಡೇಲ ಎಂದು ಹೇಳಲು ಆಗುವುದಿಲ್ಲ. ಚಸ್ಸಿ ಸಂಖ್ಯೆ ನೆನಪಿಲ್ಲಾ. 6 ನೇ ಆರೋಪಿಯ ಮನೆಯಲ್ಲಿ ಇಬ್ಬರು ಇದ್ದರು. ಸದ್ರಿ ಕಾರನ್ನು ನಮ್ಮ ಜೀಪನ ಚಾವಿಯನ್ನು ಉಪಯೋಗಿಸಿ ತೆಗೆದಿರುತ್ತೇವೆ. ಕಾರ ಕೀ ಅವರ ಮನೆಯಲ್ಲಿ ಇದ್ದ ಬಗ್ಗೆ ಶೋಧನೆ ಮಾಡಿದಾಗ ಸಿಕ್ಕಿರುವುದಿಲ್ಲ. ಜೀಪನ ಚಾವಿಯನ್ನು ಜಪ್ತು ಮಾಡಿಲ್ಲ. ಸದ್ರಿ ಕಾರಿನಲ್ಲಿ ಕಾಡು ಕೋಣದ ಕೂದಲು ಹಾಗೂ

ಚರ್ಮ ಸಿಕ್ಕಿರುತ್ತದೆ. ಚರ್ಮಕ್ಕೆ ತಾಗಿಕೊಂಡು ಸುಮಾರು 4-5 ಕೂದಲು ಕಾರನ ಹಿಂಬದಿಯ ಸೀಟಿನಲ್ಲಿತ್ತು . ಸ್ದ್ರಿ ಚರ್ಮ ಎಷ್ಟು ಹಳೆಯದಾಗಿತ್ತು ಎಂದು ವಿಚಾರಣೆ ವಾಡಿರುವುದಿಲ್ಲ. ಸ್ದ್ರಿ ಅಂಶವನ್ನು ಪಂಚನಾಮೆಯಲ್ಲಿ ತಿಳಿಸಿಲ್ಲ. ಸ್ದ್ರಿ ಸ್ಥಳದಲ್ಲಿಯು ಸಹ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇವೆ. ಸ್ದ್ರಿ ಜಪ್ತಿ ಪಡಿಸಿಕೂಂಡ ವಸ್ತುಗಳ ಮೇಲೆ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿಲ್ಲ. ಜಪ್ತುಪಡಿಸಿಕೊಂಡ ಟಾಯರ ಹಾಗೂ ಸೌಂಡ ಬಾಕ್ಸ ಯಾವ ಕಂಪನಿಗೆ ಸೇರಿದ್ದು ಎಂದು ಹೇಳಲು ಆಗವುದಿಲ್ಲ. ಕಂಪನಿಯ ಹೆಸರುಗಳನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಈ ಎಲ್ಲಾ ಪ್ರಕ್ರಿಯೇ 20 ನಿಮಿಷಗಳ ಕಾಲ ನೆಡೆದಿರುತ್ತದೆ. ನಾವು 8- 30 ಗಂಟೆಯವರೆಗೆ ಅಲ್ಲಿ ಇದ್ದೇವು.

8. 6 ನೇ ಆರೋಪಿಯ ಮನೆಯಿಂದ ಸುಮಾರು 7-8 ಕಿಲೋ ಮೀಟರ ದೂರದಲ್ಲಿ 1 ನೇ ಆರೋಪಿಯ ಮನೆಗೆ 9-00 ಗಂಟೆಗೆ ಹೋಗಿರುತ್ತೇವೆ. ಅಲ್ಲಿಯ ತನಕ ವಿಷಯವನ್ನು ಚಾಸಾ 8 ರವರು ತಿಳಿಸಿರುವುದಿಲ್ಲ. ವಲಯ ಕಚೇರಿ ಅಲ್ಲಿಯೇ ಇದ್ದು, ಚಾಸಾ 6 ರವರು ಸಹ ಕಚೇರಿಯಲ್ಲಿಯೇ ಇರುತ್ತಾರೆಂದರೆ ಸರಿಯಲ್ಲ. ವಿಷಯವನ್ನು 1 ನೇ ಆರೋಪಿಗೆ ತಿಳಿಸಿರುತ್ತೇವೆ. ಮನೆಯಲ್ಲಿ 3 ಜನರು ಇದ್ದರು. ಮನೆಯ ಸಂಖ್ಯೆ ಹಾಗೂ ಮಾಲೀಕತ್ವ ಗೋತ್ತಿಲ್ಲ. ಸದಿರ ಮನೆಯಲ್ಲಿ ಸುಮಾರು ಅರ್ಧ ಗಂಟೆಗಳ ಕಾಲ ಇದ್ದೇವು. ಸ್ದ್ರಿ ಮನೆಯಲ್ಲಿ 3 ಕೋಣೆಗಳು ಇದ್ದವು. ಸ್ದ್ರಿ ಮನೆಯಲ್ಲಿ ಸಹ ವಿದ್ಯುತ್ ಸರಬರಾಜು ಇರಲ್ಲಿಲ ಟಾರ್ಚನಿಂದ ಶೋಧನೆ ಮಾಡಿರುತ್ತೇವೆ. ಸ್ದ್ರಿ ವಿಷಯವನ್ನು ಪಂಚನಾಮೆಯಲ್ಲಿ ತಿಳಿಸಿಲ್ಲ. 1 ನೇ ಆರೋಪಿಯ ಅಂಗ ಜಪ್ತಿ ಮಾಡಿರುತ್ತೇವೆ. ಸ್ದ್ರಿ ಸ್ಥಳದಲ್ಲಿಯು ಸಹ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇವೆ. ಎಲ್ಲಾ ಪಂಚನಾಮೆಗಳನ್ನು ಹೋದ ಸ್ಥಳಗಳಲ್ಲಿಯೇ ಮಾಡಿರುತ್ತೇವೆ. ನಾವು ಎಲ್ಲರಾ ಸೇರಿ ಒಂದೇ ಪಂಚನಾಮೆಯನ್ನು ಮಾಡಿರುತ್ತೇವೆ. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ಪಂಚರು ಹೇಳಿದ ಮೇರೆಗೆ ಬರೆದಿರುತ್ತೇನೆ. ಪಂಚರಿಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಸ್ದ್ರಿ ವಿಷಯವನ್ನು ಪಂಚನಾಮೆಯಲ್ಲಿ ತಿಳಿಸಿಲ್ಲ.

9. ಜಪ್ತು ಪಡಿಸಿಕೊಳ್ಳುವ ಸಮಯದಲ್ಲಿ ಪೋಟೊವನ್ನು ತೆಗೆದಿರುತ್ತೇವೆ. ನಿಪಿ 9 ರಲ್ಲಿ ಕಾಣಿಸಿದ ಪಾತ್ರೆಗಳು 15 ಮತ್ತು 5 ಕೆ.ಜಿ ಸಾಮರ್ಥ್ಯ ಹೊಂದಿರುತ್ತದೆ. ಸ್ದ್ರಿ ಪೋಟೊವನ್ನು ನೋಡಿದಾಗ 5 ಕೆ.ಜಿ ಸಾಮರ್ಥ್ಯಕ್ಕಿಂತ

ಕಡಿಮೆ ಸಾಮರ್ಥ್ಯವನ್ನು ಹೊಂದಿರುವುದಾಗಿ ಕಾಣಿಸುತ್ತದೆ ಎಂದರೆ ಅಂದಾಜು 5 ಕೆ.ಜಿ ಸಾಮರ್ಥವನ್ನು ಹೊಂದಿರುತ್ತದೆ ಎಂದು ನುಡಿಯುತ್ತಾರೆ. ಜಪ್ತು ಮಾಡಿಕೊಂಡ ವಸ್ತುಗಳನ್ನು ಪ್ಲಾಸ್ಟೀಕ ಚೀಲದಲ್ಲಿ ನಿಪಿ 8 ಮತ್ತು 10 ರಂತೆ ತುಂಬಿಕೊಂಡಿರುತ್ತೇವೆ. ಸದ್ರಿ ಅಂಶವನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ. ಸದ್ರಿ ಪ್ಲಾಸ್ಟೀಕ ಚೀಲದಲ್ಲಿ ಯಾವ ವಸ್ತುಗಳನ್ನು ತುಂಬಿಕೊಂಡಿರುತ್ತೇವೆ ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸದ್ರಿ ಪ್ಲಾಸ್ಟೀಕ ಚೀಲವನ್ನು ಸಹ ಜಪ್ತು ಮಾಡಿಕೊಳ್ಳಬೇಕಾಗಿರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ